**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>**

**<u>Spl.C.NDPS.9/2022</u>**

| | | |
|---|---|---|
| ಸಾಕ್ಷಿದಾರರ ಹೆಸರು | : | ವಸಂತ ಪಿ.. |
| ತಂದೆಯ/ಗಂಡನ ಹೆಸರು | : | ಪರಶುರಾಮಪ್ಪ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ಕಂದಾಯ ಅಧಿಕಾರಿಗಳು, ರಾಣೇಬೆನ್ನೂರು |
| ವಾಸ ಸ್ಥಳ | : | ರಾಣೇಬೆನ್ನೂರು |

ಪಿ.ಡಬ್ಲ್ಯೂ 2

ಸಿ.ಡಬ್ಲ್ಯೂ 3

ದಿ: 17-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)</u>**:

1. ನಾನು ಹರಿಹರ ನಗರ ಸಭೆಯಲ್ಲಿ ಕಂದಾಯ ನಿರೀಕ್ಷಕರಾಗಿ 2020 ರಿಂದ 2022 ರವರೆಗೆ ಕೆಲಸ ಮಾಡಿದ್ದೇನೆ. ದಿಃ 12-09-2020 ರಂದು 12.20 ಗಂಟೆಗೆ ನನ್ನನ್ನು ಪೌರಾಯುಕ್ತರ ಕಛೇರಿಗೆ ಕರೆಸಿ, ಹರಿಹರ ಗ್ರಾಮಾಂತರ ಸಿ.ಪಿ.ಐ. ಕಛೇರಿಗೆ ಹೋಗಲು ಹೇಳಿದರು. ಹರಿಹರ-ಶಿವಮೊಗ್ಗ ರಾಜ್ಯ ಹೆದ್ದಾರಿ ರಸ್ತೆಯಲ್ಲಿ ಭರಣಿ ಹೋಟೆಲ್ ಹತ್ತಿರ ಗಾಂಜಾ ಮಾರಾಟ ಮಾಡುತ್ತಿದ್ದಾರೆ ಅಂತ ಮಾಹಿತಿ ಬಂದಿದೆ, ಆದ್ದರಿಂದ ಸಾಕ್ಷಿಗಾಗಿ ಸಹಕರಿಸುವಂತೆ ಪೌರಾಯುಕ್ತರು ನನಗೆ ಹೇಳಿ ಕಳುಹಿಸಿದರು. ಅದರಂತೆ ನಾನು ಮತ್ತು ಚಾಸಾ-2 ರವರು ಪೊಲೀಸ್ ಠಾಣೆಗೆ 12.30 ಗಂಟೆಗೆ ಹೋದೆವು. ನಾವು ಪೊಲೀಸ್ ಠಾಣೆಗೆ ಹೋದಾಗ ಅಲ್ಲಿ ಚಾಸಾ-1, 4 ಮತ್ತು ಪೊಲೀಸ್ ಸಿಬ್ಬಂದಿಗಳು ಇದ್ದರು. ಅಲ್ಲಿ ಚಾಸಾ-1 ರವರು

ನಮಗೆ ಹರಿಹರ-ಶಿವಮೊಗ್ಗ ರಾಜ್ಯ ಹೆದ್ದಾರಿ ರಸ್ತೆಯಲ್ಲಿ ಭರಣಿ ಹೋಟೆಲ್ ಹತ್ತಿರ ಗಾಂಜಾ ಮಾರಾಟ ಮಾಡುತ್ತಿದ್ದಾರೆ ಸಾಕ್ಷಿಗಾಗಿ ಸಹಕರಿಸಬೇಕು ಅಂತ ಹೇಳಿ ನಮಗೆ ನೋಟಿಸ್ಸು ಕೊಟ್ಟರು.

2. ಪಿ.ಪಿ. ರವರು ಎಲ್ಲಾ ಮೂಲ ದಾಖಲೆಗಳು Spl.C.NDPS.9/2020 ರಲ್ಲಿ ಲಭ್ಯ ಇರುವುದಾಗಿ ನುಡಿದಿರುತ್ತಾರೆ. ಈ ಪ್ರಕರಣದಲ್ಲಿ ಪ್ರತಿಗಳು ಇದ್ದು, ಆದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

ದಿ: 30-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

3. ನಂತರ ನಮ್ಮನ್ನು ಪಂಚರಾಗಿ ಬನ್ನಿ ಅಂತ ನಮಗೆ ನೋಟಿಸ್ಸು ಜಾರಿ ಮಾಡಿದರು. ಆ ನೋಟಿಸ್ಸಿನ ಮೂಲ ಪ್ರತಿಯನ್ನು ಮೂಲ ಪ್ರಕರಣವಾದ Spl.C.NDPS.09/2020 ನೇದರಲ್ಲಿ ಈಗಾಗಲೇ ನಿಪಿ-1 ಅಂತ ಗುರುತಿಸಲಾಗಿದೆ.

4. ನಂತರ ಚಾಸಾ-1 ರವರು ನನ್ನನ್ನು, ಚಾಸಾ-3 ರವರನ್ನು, ಚಾಸಾ-4 ಹಾಗೂ ಸಿಬ್ಬಂದಿಗಳನ್ನು ಕರೆದುಕೊಂಡು ಮತ್ತು ಲ್ಯಾಪಟಾಪ್, ಪ್ರಿಂಟರ್, ಅರಗು ಹಾಗೂ ಇತರೆ ಸಾಮಾಗ್ರಿಗಳನ್ನು ತೆಗೆದುಕೊಂಡು ಮಧ್ಯಾಹ್ಣ 12.50 ಗಂಟೆಗೆ ಠಾಣೆಯನ್ನು ಬಿಟ್ಟೆವು. 10 ನಿಮಿಷಕ್ಕೆ ಮಾಹಿತಿ ಇದ್ದ ಸ್ಥಳಕ್ಕೆ ತಲುಪಿ, ಸ್ವಲ್ಪ ದೂರದ ಮರೆಯಲ್ಲಿ ಗಾಡಿಯನ್ನು ನಿಲ್ಲಿಸಿ ವೀಕ್ಷಿಸಿದರು. ಆಗ ಭರಣಿ ಹೋಟೆಲ್ ಮುಂಭಾಗದಲ್ಲಿ ಕೆ.ಎ.14 ಬಿ.8176 ಕಪ್ಪು ಮತ್ತು ಹಳದಿ ಬಣ್ಣದ ಆಟೋದಲ್ಲಿ 03 ಜನರು ಇದ್ದರು, ಅವರ ಪೈಕಿ ಮಲ್ಲಿಕಾರ್ಜುನ ಎಂಬುವವರ ಬಳಿ ನೀಲಿ ಬಣ್ಣದ ಬ್ಯಾಗ್ ಇತ್ತು, ರಾಹುಲ್ ಎಂಬುವವರ ಬಳಿ ಕೆಂಪು ಬಣ್ಣದ ಬ್ಯಾಗ್ ಇತ್ತು. ಅವರು ಏನೋ ಒಂದು ಮಾರಾಟ ಮಾಡುತ್ತಿರುವುದು ಕಂಡು ಬಂದಿತು, ಆದ್ದರಿಂದ ಪೊಲೀಸರು  ಅವರನ್ನು ಸುತ್ತುವರೆದು ಹಿಡಿದರು. ಅವರನ್ನು ಚೆಕ್ ಮಾಡಲು ಅವರಿಗೆ ನೋಟಿಸ್ಸು ಕೊಟ್ಟರು. ಚಾಸಾ-1 ರವರು ಅವರ ಹೆಸರು ಮತ್ತು ವಿಳಾಸವನ್ನು ವಿಚಾರಿಸಿದರು. ಆಗ ತಮ್ಮ ಹೆಸರನ್ನು ರಾಹುಲ್, ಮಲ್ಲಿಕಾರ್ಜುನ ಮತ್ತು ಪ್ರಮೋದ ಅಂತ ಹೇಳಿದರು. ರಾಹುಲ್ ಎಂಬುವವರ ಬಳಿ ಇದ್ದ ಕೆಂಪು ಬಣ್ಣದ ಬ್ಯಾಗ್ ನ್ನು ಪರಿಶೀಲನೆ ಮಾಡಿದಾಗ ಅದರಲ್ಲಿ ಸೊಪ್ಪು ಮತ್ತು ಮೊಗ್ಗಿನಂತಹ ವಸ್ತು ಕಂಡು ಬಂತು. ಅದರ ವಾಸನೆ ಗಾಂಜಾದ ವಾಸನೆ ಬರುತ್ತಿತ್ತು. ಆದ್ದರಿಂದ ಅದು ಗಾಂಜಾ ಅಂತ ಗೊತ್ತಾಯಿತು. ನಂತರ ಮಲ್ಲಿಕಾರ್ಜುನರವರ ನೀಲಿ ಬಣ್ಣದ ಬ್ಯಾಗ್ ನ್ನು ಪರಿಶೀಲನೆ ಮಾಡಿದಾಗ, ಅವರ ಬಳಿ ಸಹ ಅದೇ ತರಹ ಗಾಂಜಾ ವಾಸನೆ ಬರುವ ವಸ್ತು ಇತ್ತು. ತಲಾ 02 ಬ್ಯಾಗ್ ಗಳಿದ್ದ ವಸ್ತುಗಳನ್ನು ತೂಕ

ಮಾಡಿ ನೋಡಿದಾಗ ಅದು ತಲಾ 2.45 ಗ್ರಾಂ. ತೂಕ ಇದ್ದವು. ಪ್ರಮೋದರವರ ಅಂಗ ಶೋಧನೆ ಮಾಡಿದಾಗ ಅವರ ಪ್ಯಾಂಟಿನ ಬಲ ಜೇಬಿನಲ್ಲಿ 11 ಸಣ್ಣ ಪ್ಲಾಸ್ಟಿಕ್ ಕವರ್ ಗಳು ಇದ್ದವು, ಅದರಲ್ಲಿ ಗಾಂಜಾ ಸೊಪ್ಪು ಇತ್ತು, ಅದನ್ನು ತೂಕ ಮಾಡಿ ನೋಡಿದಾಗ 80 ಗ್ರಾಂ. ಗಾಂಜಾ ಇತ್ತು ಮತ್ತು ಅವರ ಪ್ಯಾಂಟ್ ನ ಎಡ ಜೇಬಿನಲ್ಲಿ 23 ಸಣ್ಣ ಪಾಲಿಥಿನ್ ಕವರ್ ಗಳು ಇದ್ದವು. ನಂತರ ಅವುಗಳನ್ನು ಒಂದು ಬ್ಯಾಗ್ ನಲ್ಲಿ ಹಾಕಿ ಸೀಲ್ ಮಾಡಲಾಯಿತು. ನಂತರ ಆರೋಪಿತರು ತಂದಿದ್ದ ಆಟೋವನ್ನು ಸಹ ಜಪ್ತು ಮಾಡಿ, ಪಂಚನಾಮೆ ಮಧ್ಯಾಹ್ನ 1.30 ರಿಂದ 3.15 ರವರೆಗೆ ಮಾಡಿದರು. ಆ ಪಂಚನಾಮೆಗೆ ನಾನು ಸಹಿ ಮಾಡಿದ್ದೇನೆ. ಪಂಚನಾಮೆಯ ಮೂಲ ದಾಖಲೆಗಳು SPL.C.NDPS.9/2020 ನೇದರಲ್ಲಿ ಇರುವುದರಿಂದ ಈ ಹಂತದಲ್ಲಿ ಪಿ.ಪಿ. ರವರು ಮೂಲ ದಾಖಲೆಗಳನ್ನು ಪಡೆದುಕೊಳ್ಳುವ ಸಲುವಾಗಿ ಸಮಯ ಕೇಳಿದ್ದು, ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.